doc-607
T-P-2

Reg No B G 155 16 12 72

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಪಾದಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸಂಸತ್ ಮುಂದೆ ಕೇಂದ್ರನೌಕರರ ಪ್ರದರ್ಶನ

ಅರಮನೆ ವಿಷಯ

ಬೆಂಗಳೂರು— ಮೈಸೂರು ಅರಮನೆ ಸಮಸ್ಯೆಯು ಕೇಂದ್ರದ ವ್ಯಾಪ್ತಿಗದಲ್ಲಿದೆ ಯೆಂದು ವಿಧಾನ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ತಿಳಿಸಿದರು.

○

ಕೋರ್ಟು ಇಲ್ಲದಂತಾಯಿತು

ಕೊಲಂಬೊ — ಶ್ರೀ ಲಂಕಾ ರಾಜ್ಯಾಂಗ ನ್ಯಾಯಾಸ್ಥಾನ ಎರಡನೇ ದಿನದಲ್ಲೂ ನಡೆಯಲಿಲ್ಲ — ಒಬ್ಬ ಜಡ್ಜರು ರಾಜೀನಾಮೆ ಕೊಟ್ಟರೆಂದೂ ಹೇಳಲಾಗಿದೆ — ಪ್ರೆಸ್ ಬಿಲ್ ವಿರುದ್ಧದ ಅರ್ಜಿಗಳ ವಿಚಾರಣೆ ನಿಂತಿತು — ಕೋರ್ಟು ಇಲ್ಲದಂತಾಗಿದೆ.

★

ಲಾಯರುಗಳ ಮೆರವಣಿಗೆ

ಕರಾಚಿ— ವಿದ್ಯಾರ್ಥಿಗಳ ಮೇಲಿನ ಪೋಲೀಸು ದಬ್ಬಾಳಿಕೆ ಪ್ರತಿಭಟಿಸಿ ಲಾಯರುಗಳು ನಡೆಸಿದ ಮೆರವಣಿಗೆ ಮೇಲೆ ಯಾರೋ ಗುಂಡುಹಾರಿಸಿದ್ದರಿಂದ 10 ಮಂದಿ ಗಾಯಗೊಂಡರು.

★

ಮಹಿಳೆಯರ ಸ್ವತ್ಯ ಕಾರ್ಯ

ಬೆಂಗಳೂರು— ಗುಲ್ಬರ್ಗಾ ಅಧಿಕಾರಿಗಳ ಪತ್ನಿಯರು, ಅಭಾವಪೀಡಿತ ಪ್ರದೇಶಗಳ ಸಂಕಟಕ್ಕೀಡಾಗಿರುವ ಜನರಿಗೆ ಬೊಂಡ್ ಗ್ರಾಮದಲ್ಲಿ ಒಂದು ದಿನ ಉಚಿತ ಊಟ ಹಾಕಲು, ಮನೆಮನೆಗೂ ಹೋಗಿ ಪದಾರ್ಥ-ಮತ್ತು ಹಣ ಶೇಖರಿಸುತ್ತಿದ್ದಾರೆ

ಚಿಲ್ಲರೆ ನಾಣ್ಯಗಳು

ನವದೆಹಲಿ— ಈಗ ದಿನಕ್ಕೆ 75 ಲಕ್ಷ ಚಿಲ್ಲರೆ ನಾಣ್ಯಗಳು ತಯಾರಾಗುತ್ತಿರುವದನ್ನು ಶೇಕಡ 33 ರಷ್ಟು ಹೆಚ್ಚಿಸಲಾಗುತ್ತಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಆರಮನೆ ಸಮಸ್ಯೆ

ನವದೆಹಲಿ— ಮೈಸೂರು ಮಹಾರಾಜರವರು ತಮ್ಮ ಆರಮನೆಗಳನ್ನು ಪರಭಾರೆ ಮಾಡುವ ಪ್ರಶ್ನೆಯ ವಿಷಯ ಇನ್ನೂ ಪರಿಶೀಲನೆಯಲ್ಲಿದೆ ಎಂದು ರಾಜ್ಯ ಸಭೆಯಲ್ಲಿ ಪ್ರಧಾನಿ ಇಂದಿರಾರವರು ಹೇಳಿದರು.

★

ದೇವಾಲಯಗಳಲ್ಲಿ

ಬೆಂಗಳೂರು— ದೇವಾಲಯದ ಅರ್ಚಕರು, ಆಗಮ ಪಂಡಿತರು, ಮತ್ತು ಆಡಳಿತಗಾರರ ನೇಮಕ, ತರಬೇತು, ಸೇವಾ ನಿಯಮ ಬಗ್ಗೆ ಪರಿಶೀಲನೆ ಮಾಡಲು ಸರಕಾರ ಯೋಜಿಸಿದೆ ಎಂದು ತಿಳಿಸಲಾಗಿದೆ

●

ಭಾರತ ಸಂಸ್ಥೆ ವಶಪಡಿಸಿಕೊಳ್ಳಲಾಯ್ತು

ಆಕ್ರಾ— 505000 ಸ್ಟರ್ಲಿಂಗ್ ಕಸ್ಟಂಸ್ ತೆರಿಗೆಯನ್ನು ಮೋಸದಿಂದ ಪಾವತಿ ಮಾಡದ ಆಪಾದನೆಗಾಗಿ ಭಾರತ ಮಾಲೀಕತ್ವದ ಲಾಯಲ್ಟಿ ಗುಂಪಿನ ಕಂಪೆನಿಗಳನ್ನು ಘಾನಾ ಸರಕಾರ ವಶಪಡಿಸಿಕೊಂಡಿರುವದಾಗಿ ಪ್ರಕಟಿಸಿದೆ

★

ಮಿಷನರಿಗಳಿಗೆ ಹಣ

ನವದೆಹಲಿ— ಕಳೆದ 2 ವರ್ಷಗಳಿಂದ ಮಿಷನರಿಗಳು ಮತ್ತು ಮಿಷನರಿ ಸಂಸ್ಥೆಗಳು ವಿದೇಶಿ ಮೂಲದಿಂದ ರೂ 33 43 ಮತ್ತು ರೂ. 47 66 ಕೋಟಿ ಹಣ ಪಡೆದಿರುವರೆಂದು ಸರಕಾರ ನಂಬಲು ಕಾರಣ ವಿರುವದೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

●

ಹೋಟಲುಗಳು ಬಂದ್

ಕಡೂರು— ಕಾಲರಾ ಪೂರ್ತಾ ಹತೋಟಿಗೆ ಬರುವವರೆಗೆ ಎಲ್ಲಾ ಹೋಟಲುಗಳು ಫಲಹಾರಮಂದಿರಗಳು, ತಿಂಡಿ ತಯಾರಿಸುವದನ್ನು ನಿಲ್ಲಿಸಲು ಆಜ್ಞೆ ಮಾಡಲಾಗಿದೆ — ಸಿನಿಮಾಗಳೂ ಪ್ರತಿಬಂಧಿಸಲಾಗಿದೆ.

ಆಹಾರ ಧಾನ್ಯಗಳ ಆಮದು

ಪೂನಾ — ಆಹಾರ ಧಾನ್ಯಗಳು, ಸೇವಿಸುವ ಎಣ್ಣೆಯನ್ನು ಸರಕಾರ ವಿದೇಶಗಳಲ್ಲಿ ರೂ 89 ಕೋಟಿಗೆ ಕೊಂಡುಕೊಂಡಿದೆಯೆಂದು ವ್ಯವಸಾಯ ಮಂತ್ರಿ ಷೇರ್ ಸಿಂಗ್ ರವರು ಪತ್ರಿಕೆಯವರಿಗೆ ತಿಳಿಸಿದರು — ರೂ. 24 ಕೋಟಿಯ 100000 ಟನ್ ಎಣ್ಣೆ ಬೀಜ ಮತ್ತು ಎಣ್ಣೆ ಪೈಕಿ ಭಾಗಗಳು ಬರಲು ಪ್ರಾರಂಭವಾಗಿದೆ ಎಂದೂ ಹೇಳಿದರು.

★

ತಂಡ ತಂಡ ಉಪವಾಸ

ಮೈಸೂರು— ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಸ್ಥಳೀಯ ಉಮೇದುವಾರರು ಜಿಲ್ಲಾಧಿಕಾರಿಗಳವರ ಕಚೇರಿ ಮುಂದೆ ತಂಡತಂಡವಾಗಿ ಉಪವಾಸ ಮಾಡಲು ನಿರ್ಧರಿಸಿರುವರು.

ಮಗು ಹಾವನ್ನು ತಿಂದಿತು

ಪರ್ತ — ತಮ್ಮ ಮನೆ ಹಿತ್ತಲಲ್ಲಿ ಆಡುತ್ತಿದ್ದ 18 ತಿಂಗಳ ಮಗು ಅಲ್ಲಿ ಕಂಡ ವಿಷಸರ್ಪದ ಮರಿಯನ್ನು ಹಿಡಿದುಕೊಂಡು ಅದರ ತಲೆಯನ್ನು ಬಾಯಿಗೆ ಹಾಕಿಕೊಂಡು 8 ಅಂಗುಲದಷ್ಟು ತಿಂದಿತು — ಇದನ್ನು ಕಂಡ ಮನೆಯವರು ಕೂಡಲೇ ಆಸ್ಪತ್ರೆಗೆ ಸಾಗಿಸಿದರು. ಮಗುವಿನ ಜೀವಕ್ಕೆ ಏನೂ ಅಪಾಯವಾಗಿಲ್ಲ

ಕಂದಾಯಗಳ ಮೇಲೆ ತೆರಿಗೆ

ಬೆಂಗಳೂರು— ಸಿಟಿ ಬಸ್‌ಗಳಲ್ಲಿ ನಷ್ಟವಾಗುತ್ತಿರುವದನ್ನು ಪರಿಹರಿಸಿ ಕೊಳ್ಳಲು ಕಾರ್ಪೊರೇಷನ್ನಿನ ಕಂದಾಯಗಳ ಮೇಲೆ ತೆರಿಗೆ ವಿಧಿಸಲು ಯೋಚಿಸಲಾಗಿದೆಯೆಂದು ಸಾರಿಗೆ ಮಂತ್ರಿ ಶ್ರೀ ಅಜೀಜ್ ಸೇಟ್ ರವರು ಶಾಸನಸಭೆಯಲ್ಲಿ ಹೇಳಿದರು — ಸಿಟಿ ಬಸ್ ಓಡಾಟದಲ್ಲಿ ಬೆಂಗಳೂರಿನಲ್ಲಿ ಮಾತ್ರವಲ್ಲದೆ ವಿಶ್ವದಾದ್ಯಂತ ನಗರಗಳಲ್ಲಿ ಹೀಗೇ ಆಗುತ್ತಿದೆ ಎಂದೂ ಹೇಳಿದರು.

ಭಾರಿ ಪ್ರದರ್ಶನ

ನವದೆಹಲಿ— ಸಹಸ್ರಗಟ್ಟಲೆ ರೈಲ್ವೆ ಕೆಲಸಗಾರರು, ಕೈಗಾರಿಕೆಗಳ ಕೆಲಸಗಾರರು, ಆಂಚೆ ತಂತಿ ಮತ್ತು ಕೇಂದ್ರ ಸರಕಾರಿ ಮುದ್ರಣಾಲಯದ ಕೆಲಸಗಾರರು ನಿನ್ನೆ ಪಾರ್ಲಿಮೆಂಟುಭವನದ ಮುಂದೆ ತಮ್ಮ ಶೇಕಡ 8.32 ಬೋನಸ್ ಕೇಳಿಕೆಯ ಒತ್ತಾಯಕ್ಕಾಗಿ ಭಾರಿ ಪ್ರದರ್ಶನ ನಡೆಸಿದರು — ಜನವರಿ 15 ರೊಳಗೆ ಸರಕಾರದ ಅನುಮತಿ ದೊರೆಯದಿದ್ದರೆ ಮುಷ್ಕರದ ಬೆದರಿಕೆಯೂ ಹಾಕಲಾಗಿದೆ.

★

ಆಹಾರಧಾನ್ಯ ಸಗಟು ವ್ಯಾಪಾರ

ಬೆಂಗಳೂರು— ಸರಕಾರವು ಮುಂದಿನ ವರ್ಷದಿಂದ ಆಹಾರಧಾನ್ಯ ಸಗಟು ವ್ಯಾಪಾರವನ್ನು ವಹಿಸಿಕೊಳ್ಳುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸರವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

★

ಸಾರಿಗೆ ಪಂಚವಾರ್ಷಿಕ ಯೋಜನೆ

ಬೆಂಗಳೂರು— ರಾಜ್ಯದ ರಸ್ತೆ ಸಾರಿಗೆ ಸಚಿವಾಲಯವು, ಈ ಸಂಬಂಧದಲ್ಲಿನ ಎಲ್ಲ ಆವಶ್ಯಕತೆಗಳನ್ನೂ ಪರಿಪೂರ್ಣಗೊಳಿಸಲು ಒಂದು ಪಂಚವಾರ್ಷಿಕ ಯೋಜನೆಯನ್ನು ತಯಾರಿಸುತ್ತಿದೆಯೆಂದು ಸಾರಿಗೆ ಮಂತ್ರಿ ಶ್ರೀ ಅಜೀಜ್ ಸೇಟ್ ರವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

○

ಎಂ ಪಿ ಸಿ ಸಿ ಅಧ್ಯಕ್ಷತೆ

ಬೆಂಗಳೂರು— ಎಂ ಪಿ ಸಿ ಸಿ ಅಧ್ಯಕ್ಷತೆ ಸಮಸ್ಯೆಗೆ ಕಾವೇರಿದೆ ಎಂದು ಹೇಳಲಾಗಿದೆ — ಪ್ರಧಾನಿಯವರಿಂದ ಬಂದ ತುರ್ತು ಕರೆಗಾಗಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ನಿನ್ನೆ ಕೂಡಲೇ ಡೆಲ್ಲಿಗೆ ವಿಮಾನದಲ್ಲಿ ಪ್ರಯಾಣ ಮಾಡಿದರು.

★

ಜನ್ಮ ಶತಮಾನೋತ್ಸವ

ಮೈಸೂರು— ಪ್ರೊ ॥ ಹಿರಣ್ಣಯ್ಯನವರ ಜನ್ಮ ಶತಮಾನೋತ್ಸವದಲ್ಲಿ ಆವರ ಪಾಂಡಿತ್ಯವನ್ನು ವಿದ್ವಾಂಸರು ಪ್ರ ಶಂ ಸಿಸಿದರು

ಭೂ ಪರಿಮಿತಿ

ಬೆಂಗಳೂರು— ಹೆಚ್ಚಿನ ಭೂ ಪರಿಮಿತಿಗೆ ಶಾಸನಸಭಾ ಕಾಂಗ್ರೆಸ್ ಪಾರ್ಟಿಯ 193 ಮಂದಿಯಲ್ಲಿ 82 ಮಂದಿ ಬೆಂಬಲನೀಡಿರುವರು.

ಜನಸಂಘದ ಅಧಿವೇಶನ

ಬೆಂಗಳೂರು— 1973 ನೇ ಜನವರಿ 21, 22 ರಂದು ನಡೆಸಲು ನಿಶ್ಚಯಿಸಲಾಗಿದ್ದ ಜನಸಂಘದ ಕರ್ನಾಟಕ ಪ್ರಾಂತೀಯ ಅಧಿವೇಶನವು ಫೆಬ್ರವರಿ 24, 25 ರಂದು ನಡೆಯುವುದೆನ್ನಲಾಗಿದೆ.

ಫಿಲಂ ಕಾರ್ಪೊರೇಷನ್ನಿನ ನೆರವು

ನವದೆಹಲಿ— ಫಿಲಂ ಫೈನಾನ್ಸ್ ಕಾರ್ಪೊರೇಷನ್ 69–72 ರಲ್ಲಿ ಚಲನಚಿತ್ರ ತಯಾರಕರಿಗೆ ರೂ. 4741496 ಕೊಟ್ಟಿದೆಯೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ದಿವ್ಯವಾಣಿ

ಅತಿ ಹೆಚ್ಚು ಆತುರತೆ ತಪ್ಪಿಗೆ-ದಾರಿ. — ವೊಲಿಯೇರ್

ವುಡ್‌ಲಾಂಡ್ 15 12 72 ರಿಂದ
ಅನೋಫಿ ಪ್ರಾರಂಭ

ಸೆವೆ ಆರ್ಟ್ಸ್ ಪಿಕ್ಚರ್ಸ್‌ರವರ
ಹಿಂದಿ ವರ್ಣ ಚಿತ್ರ

ರಾ ಜಾ ಜಾ ನಿ

ಪ್ರತಿ ದಿನ 4 ಪ್ರದರ್ಶನೆಗಳು

ದಿನ ಬೆಳಿಗ್ಗೆ 10–30, ಮಧ್ಯಾಹ್ನ 2–45, ಸಂಜೆ 6–30, ರಾತ್ರಿ 9–45

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ಪ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ಸೂಚನೆ : ಬಾಲ್ಕನಿ ತ್ವರಗತಿಗಳಿಗೆ ದಿನ ಬೆಳಿಗ್ಗೆ 11–15 ರಿಂದ 12–15ರ ವರೆಗೆ ಮುಂಗಡ ಟಿಕೆಟ್ ಕೊಡಲಾಗುತ್ತದೆ

ಅಪೆರಾ 2 ನೇ ವಾರ

ಅತ್ಯನೋಫಿ ಹಿಂದಿ ಕಲರ್ ಚಿತ್ರ

ಗಾಂವ್ ಹಮಾರ
ಷೆಹರ್ ತುಮಾರ

ಪಾತ್ರ : ರಾಜೇಂದ್ರ ಕುಮಾರ್ ರೇಖ ಸುಜಿತ ಕುಮಾರ್ ಲಲಿತಪವಾರ್
ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ ತ್ರಿ-ಪ್ರದರ್ಶನಗಳ

SHAKTI
SUDHA

A Superb Tonic

Protect the Cow



ಭಾರತದಲ್ಲಿ ಗೋವಧೆ
ಪೂರ್ಣ ನಿಶ್ಶೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Edited Printedand Publishedby Dharmapracharanirata M S Krishna Rao (Propretor) at the Satyavadi Press, Chamarajapuram Mysore

Help The Gorakshana

— Humanitarian Propoganda Monthly ...

Contribute Liberally to the National Defence Fund